# ಕರ್ನಾಟಕ ಸರ್ಕಾರ
# ಸಮಾಜ ಕಲ್ಯಾಣ ಇಲಾಖೆ

## ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಅನುಷ್ಠಾನದ ಬಗ್ಗೆ 2015-16 ನೇ ಸಾಲಿನ ಆರ್ಥಿಕ ವರ್ಷದ ವಾರ್ಷಿಕ ವರದಿ

ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ 2013 ವಿಧೇಯಕವನ್ನು ಡಿಸೆಂಬರ್ 2013 ರಲ್ಲಿ ಜರುಗಿದ ಬೆಳಗಾವಿ ಅಧಿವೇಶನದಲ್ಲಿ ವಿಧಾನ ಮಂಡಲದಿಂದ ಅನುಮೋದನೆ ಪಡೆಯಲಾಗಿದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಕಇ 75 ಎಸ್ ಎಲ್ ಪಿ 2013 ಮೂಲಕ ದಿನಾಂಕ: 20-03-2014 ರನ್ವಯ ಸದರಿ ಕಾಯ್ದೆ ಜಾರಿಗೆ ಬಂದಿರುತ್ತದೆ. ಸದರಿ ಕಾಯ್ದೆ ಜಾರಿಗೆ ಬಂದ ನಂತರ ಒಟ್ಟು ಅಭಿವೃದ್ಧಿ ಕಾರ್ಯಕ್ರಮಗಳಿಗೆ ನಿಗಧಿಪಡಿಸಿದ ಆಯವ್ಯಯದಿಂದ, ಪ.ಜಾತಿ ಮತ್ತು ಪ.ಪಂಗಡದ ಜನಸಂಖ್ಯೆ ಆಧಾರದ ಮೇಲೆ SCSP/ TSP ಯೋಜನೆಗಳಿಗೆ ಅನುದಾನ ನಿಗಧಿಪಡಿಸಲಾಗುತ್ತಿದೆ. 2011 ರ ಜನಗಣತಿಯಂತೆ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ (6.10 ಕೋಟಿ) ಪ.ಜಾತಿ ಜನಸಂಖ್ಯೆ ಶೇ.17.15 (1.04 ಕೋಟಿ ಜನ) ಹಾಗೂ ಪ.ಪಂ ಜನಸಂಖ್ಯೆ ಶೇ.6.95 (42.00 ಲಕ್ಷ) ಇರುತ್ತದೆ.

ಸದರಿ ಕಾಯ್ದೆಯ ಸೆಕ್ಷನ್ (5) ರ ಪ್ರಕಾರ ಸಮಾಜ ಕಲ್ಯಾಣ ಇಲಾಖೆಯು ನೋಡಲ್ ಇಲಾಖೆಯಾಗಿ ಕಾರ್ಯ ನಿರ್ವಹಿಸುತ್ತದೆ. 2015-16 ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಅಭಿವೃದ್ಧಿ ಇಲಾಖೆಗಳಿಗೆ ಹಂಚಿಕೆಯಾದ ಅನುದಾನಕ್ಕೆ ಅನುಗುಣವಾಗಿ ವಿವಿಧ ಕಾರ್ಯಕ್ರಮಗಳಿಗೆ ಆಯಾ ಇಲಾಖೆಗಳು ಕ್ರಿಯಾ ಯೋಜನೆಗಳನ್ನು ರೂಪಿಸಿ ಮಾನ್ಯ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿರುವ ನೋಡಲ್ ಏಜೆನ್ಸಿಗೆ ಸಲ್ಲಿಸಿರುತ್ತಾರೆ. ಅದರಂತೆ ಕ್ರಿಯಾ ಯೋಜನೆಗಳನ್ನು ಪರಿಶೀಲಿಸಿ, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿರುವ ರಾಜ್ಯ ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ತಿಗೆ ಶಿಫಾರಸ್ಸು ಮಾಡಲಾಗುತ್ತದೆ. ಅಂತಿಮವಾಗಿ ದಿನಾಂಕ: 26-05-2015 ರಂದು ಅಭಿವೃದ್ಧಿ ಇಲಾಖೆಗಳ ಕ್ರಿಯಾ ಯೋಜನೆಗಳನ್ನು ಅನುಮೋದಿಸಲಾಗಿದೆ. ರಾಜ್ಯ ಅಬಿವೃಧ್ಧಿ ಪರಿಷತ್ ಅನುಮೋದನೆಯಂತೆ ಆಯಾ ಇಲಾಖೆಗಳು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿರುತ್ತಾರೆ.

### 2015-16 ನೇ ಸಾಲಿನ SCSP/ TSP ಯೋಜನೆಯಡಿಯಲ್ಲಿ ಸಾಧಿಸಿದ ಪ್ರಗತಿಯ ಸಾರಾಂಶ

(ರೂ. ಕೋಟಿಗಳಲ್ಲಿ)

| ಉಪ ಯೋಜನೆ | ನಿಗದಿಪಡಿಸಿದ ಅನುದಾನ | ಬಿಡುಗಡೆ | ಖರ್ಚು | ನಿಗದಿಗೆ ಶೇಕಡ | ಬಿಡುಗಡೆಗೆ ಶೇಕಡ |
|---|---|---|---|---|---|
| SCSP | 11819.16 | 11658.32 | 11527.37 | 98 | 99 |
| TSP | 4585.95 | 4404.16 | 4385.51 | 96 | 99 |
| ಒಟ್ಟು | 16405.11 | 16062.48 | 15912.88 | 97 | 99 |

ಮೇಲ್ಕಂಡಂತೆ 2015-16 ನೇ ಸಾಲಿನಲ್ಲಿ ಒಟ್ಟಾರೆ ಶೇ.97 ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ.

## 2015-16 ನೇ ಸಾಲಿನ ಆಯವ್ಯಯದಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯಡಿ ವಿವಿಧ ಅಭಿವೃದ್ಧಿ ಇಲಾಖೆಗಳಿಗೆ ಒದಗಿಸಿದ ಹಾಗೂ ವೆಚ್ಚಮಾಡಿದ ಅನುದಾನದ ವಿವರ

(ರೂ. ಕೋಟಿಗಳಲ್ಲಿ)

| ಕ್ರ. ಸಂ | ಇಲಾಖೆಗಳು | SCSP | | | | TSP | | | |
|---|---|---|---|---|---|---|---|---|---|
| | | ಹಂಚಿಕೆ | ಬಿಡುಗಡೆ | ಖರ್ಚು | % ಶೇಕಡ ವೆಚ್ಚ | ಹಂಚಿಕೆ | ಬಿಡುಗಡೆ | ಖರ್ಚು | % ಶೇಕಡ ವೆಚ್ಚ |
| 1 | ಕೃಷಿ | 286.72 | 286.72 | 276.95 | 97 | 120.43 | 116.24 | 113.48 | 94 |
| 2 | ತೋಟಗಾರಿಕೆ | 86.82 | 85.76 | 78.75 | 91 | 38.39 | 31.30 | 30.39 | 79 |
| 3 | ರೇಷ್ಮೆ | 29.22 | 27.92 | 26.15 | 90 | 10.88 | 10.88 | 10.54 | 99 |
| 4 | ಪಶುಸಂಗೋಪನೆ | 119.92 | 116.92 | 115.02 | 96 | 48.76 | 46.89 | 46.89 | 96 |
| 5 | ಮೀನುಗಾರಿಕೆ | 17.75 | 17.75 | 16.48 | 93 | 6.22 | 5.87 | 5.87 | 94 |
| 6 | ಸಾರಿಗೆ | 0.18 | 0.18 | 0.18 | 100 | 0.07 | 0.06 | 0.06 | 86 |
| 7 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 1524.11 | 1524.11 | 1524.11 | 100 | 596.78 | 596.78 | 596.78 | 100 |
| 8 | ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ | 26.61 | 26.61 | 26.45 | 100 | 28.31 | 28.31 | 28.82 | 99 |
| 9 | ಸಹಕಾರ | 79.99 | 67.03 | 67.03 | 80 | 52.62 | 48.74 | 48.74 | 93 |
| 10 | ಸಮಾಜ ಕಲ್ಯಾಣ/ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ | 2935.26 | 2986.18 | 2919.29 | 100 | 1052.91 | 966.96 | 966.96 | 92 |
| 11 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 306.54 | 294.30 | 287.79 | 94 | 116.89 | 114.17 | 112.66 | 96 |
| 12 | ವಾರ್ತಾ | 2.40 | 2.40 | 2.40 | 100 | 0.30 | 0.29 | 0.29 | 97 |
| 13 | ಪ್ರವಾಸೋದ್ಯಮ | 22.49 | 22.49 | 22.49 | 100 | 10.34 | 10.34 | 10.34 | 100 |
| 14 | ಯುವಜನ ಸೇವೆಗಳು | 17.13 | 11.20 | 11.06 | 65 | 6.93 | 4.08 | 4.08 | 51 |
| 15 | ಕಂದಾಯ | 345.57 | 345.57 | 345.57 | 100 | 84.93 | 84.93 | 83.93 | 98 |
| 16 | ಐ.ಟಿ - ಬಿ.ಟಿ | 5.80 | 5.80 | 5.80 | 100 | 2.32 | 2.32 | 2.32 | 100 |
| 17 | ವಸತಿ | 1602.10 | 1601.90 | 1599.65 | 100 | 705.90 | 705.82 | 705.82 | 100 |
| 18 | ಉನ್ನತ ಶಿಕ್ಷಣ | 103.59 | 103.59 | 79.86 | 77 | 37.93 | 37.93 | 33.47 | 89 |
| 19 | ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ | 693.18 | 647.58 | 641.25 | 92 | 283.11 | 268.09 | 264.18 | 94 |
| 20 | ಕೈಮಗ್ಗ ಮತ್ತು ಜವಳಿ | 35.26 | 35.26 | 35.26 | 100 | 13.78 | 13.78 | 13.78 | 100 |
| 21 | ಭಾರಿ ಮತ್ತು ಮಧ್ಯಮ ಕೈಗಾರಿಕೆ | 57.84 | 57.84 | 57.84 | 100 | 23.35 | 23.34 | 23.34 | 100 |

| | | | | | | | | | |
|---|---|---|---|---|---|---|---|---|---|
| 22 | ಸಣ್ಣ ಕೈಗಾರಿಕೆ | 9.13 | 7.44 | 7.44 | 90 | 3.72 | 2.98 | 2.98 | 87 |
| 23 | ನಗರಾಭಿವೃದ್ಧಿ | 168.98 | 147.93 | 147.93 | 88 | 71.46 | 62.51 | 62.51 | 88 |
| 24 | ಲೋಕೋಪಯೋಗಿ | 582.20 | 582.20 | 581.23 | 100 | 234.76 | 234.76 | 230.94 | 98 |
| 25 | ಭಾರಿ ನೀರಾವರಿ | 1709.99 | 1709.99 | 1707.74 | 100 | 590.32 | 590.32 | 589.87 | 100 |
| 26 | ಸಣ್ಣ ನೀರಾವರಿ | 190.47 | 185.65 | 185.65 | 97 | 93.00 | 83.83 | 83.83 | 90 |
| 27 | ವೈದ್ಯಕೀಯ ಶಿಕ್ಷಣ | 28.56 | 28.56 | 28.56 | 100 | 9.55 | 9.55 | 9.55 | 100 |
| 28 | ಆರೋಗ್ಯ | 382.06 | 283.48 | 283.48 | 74 | 158.03 | 123.90 | 123.90 | 86 |
| 29 | ಕಾರ್ಮಿಕ | 62.01 | 59.51 | 59.51 | 96 | 25.32 | 20.81 | 20.81 | 82 |
| 30 | ಇಂಧನ | 40.32 | 40.32 | 40.32 | 100 | 13.69 | 13.69 | 13.69 | 100 |
| 31 | ಕನ್ನಡ ಮತ್ತು ಸಂಸ್ಕೃತಿ | 30.58 | 30.10 | 30.10 | 98 | 12.40 | 12.26 | 12.26 | 99 |
| 32 | ಯೋಜನಾ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ | 276.61 | 276.61 | 276.61 | 100 | 132.23 | 132.23 | 132.23 | 100 |
| 33 | ಕಾನೂನು | 0.77 | 0.42 | 0.42 | 55 | 0.32 | 0.20 | 0.20 | 63 |
| 34 | ಹಿಂದುಳಿದ ವರ್ಗಗಳ ಕಲ್ಯಾಣ | 39.00 | 39.00 | 39.00 | 100 | 0.00 | 0.00 | 0.00 | 0 |
| **ಒಟ್ಟು** | | **11819.16** | **11658.32** | **11527.37** | **98** | **4585.95** | **4404.16** | **4385.51** | **96** |

| ಕ್ರ.ಸಂ | ವಿವರ | ಇಲಾಖೆಗಳು |
|---|---|---|
| 1 | ಶೇ.100 ರಷ್ಟು ವೆಚ್ಚ ಮಾಡಿದ ಇಲಾಖೆಗಳು – 17 | ಸಾರಿಗೆ, ಆರ್.ಡಿ.ಪಿ.ಆರ್, ಅರಣ್ಯ, ಸಮಾಜ ಕಲ್ಯಾಣ, ವಾರ್ತಾ, ಪ್ರವಾಸೋದ್ಯಮ, ಕಂದಾಯ, ಮಾಹತಿ ತಂತ್ರಜ್ಞಾನ , ವಸತಿ, ಕೈಮಗ್ಗ ಮತ್ತು ಜವಳಿ, ಭಾರಿ ಮತ್ತು ಮಧ್ಯಮ ಕೈಗಾರಿಕೆ, ಲೋಕೋಪಯೋಗಿ ಭಾರಿ ನೀರಾವರಿ, ವೈದ್ಯಕೀಯ ಶಿಕ್ಷಣ, ಇಂಧನ, ಯೋಜನಾ, ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ |
| 2 | ಶೇ.70 ರಿಂದ ಶೇ.99 ರವರೆಗೆ ವೆಚ್ಚ ಮಾಡಿದ ಇಲಾಖೆಗಳು–15 | ಕೃಷಿ, ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ, ಮೀನುಗಾರಿಕೆ, ಸಹಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಉನ್ನತ ಶಿಕ್ಷಣ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ, ಸಣ್ಣ ಕೈಗಾರಿಕೆ, ನಗರಾಭಿವೃದ್ಧಿ, ಸಣ್ಣ ನೀರಾವರಿ, ಆರೋಗ್ಯ, ಕಾರ್ಮಿಕ, ಕನ್ನಡ ಮತ್ತು ಸಂಸ್ಕೃತಿ |
| 3 | ಶೇ.50 ರಿಂದ 70 ರವರಗೆ ವೆಚ್ಚ ಮಾಡಿದ ಇಲಾಖೆಗಳು– 2 | ಯುವಜನ ಸೇವೆ ಮತ್ತು ಕಾನೂನು |

ಆರೋಗ್ಯ ಇಲಾಖೆಯಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನ ರೂ.96.37 ಕೋಟಿ ಕೇಂದ್ರದಿಂದ ಬಿಡುಗಡೆಯಾಗಿರುವುದಿಲ್ಲ.

ಮೇಲ್ಕಂಡ ಕಾಯ್ದೆಯಡಿಯಲ್ಲಿ SCSP/ TSP ಯೋಜನೆಯಡಿಯಲ್ಲಿ ಬಿಡುಗಡೆಯಾಗಿ ವೆಚ್ಚವಾಗದೇ ಇರುವ ಮೊತ್ತವನ್ನು ಆಡಿಟ್ ಮಾಡಿಸಿದ ನಂತರ ಮುಂದಿನ ಆರ್ಥಿಕ ವರ್ಷದ ತದನಂತರದಲ್ಲಿ ಬರುವ ಆರ್ಥಿಕ ವರ್ಷದಲ್ಲಿ ನೀಡಲಾಗುತ್ತದೆ. ಅದರಂತೆ 2015-16 ನೇ ಸಾಲಿನಲ್ಲಿ ಆಡಿಟ್ ಆದ ನಂತರ ನಿಖರ ವೆಚ್ಚವಾಗದೇ ಇರುವ ಮೊತ್ತ ರೂ.751.88 ಕೋಟಿಗಳನ್ನು 2017-18 ನೇ ಸಾಲಿನ ಆಯವ್ಯಯದಲ್ಲಿ ಆಯಾ ಇಲಾಖೆಗಳಿಗೆ ಮರು ಹಂಚಿಕೆ ಮಾಡಲಾಗಿದೆ.

## 2015-16 ನೇ ಸಾಲಿನಲ್ಲಿ ರಾಜ್ಯ ಪರಿಷತ್ತಿನ ನಿರ್ಣಯದಂತೆ ಇಲಾಖಾವಾರು ಅನುಷ್ಠಾನ ಮಾಡಿರುವ ಪ್ರಮುಖ ಕಾರ್ಯಕ್ರಮಗಳು:

### ಕೃಷಿ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 286.72 | 276.95 | 97 |
| ಟಿ.ಎಸ್.ಪಿ | 120.43 | 113.48 | 94 |

- ಒಟ್ಟಾರೆ ಕೃಷಿ ಇಲಾಖೆಯಲ್ಲಿ ಶೇ.95 ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ರೈತರಿಗೆ ಬಿತ್ತನೆ ಬೀಜ ವಿತರಣೆ, ಕೃಷಿ ಉಪಕರಣಗಳು, ಸಾವಯವ/ಬಯೋ ಗೊಬ್ಬರ, ಹನಿ ನೀರಾವರಿ ಮತ್ತು ತುಂತುರು ನೀರಾವರಿ ಘಟಕಗಳು/ ಗ್ರೀನ್‌ಹೌಸ್, ಪಾಲಿಹೌಸ್ ಇತ್ಯಾದಿ ಸೌಲಭ್ಯಗಳನ್ನು ಶೇಕಡ 90 ರ ಸಹಾಯಧನದಲ್ಲಿ ನೀಡಲಾಗಿದೆ.
- ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ರೈತರಿಗೆ ಟ್ರಾಕ್ಟರ್ ಖರೀದಿಗೆ ರೂ. 2.00 ಲಕ್ಷ ಸಹಾಯಧನ ನೀಡಲಾಗಿದೆ.
- ಕೃಷಿ ಭಾಗ್ಯ ಯೋಜನೆ - ಮಳೆ ಆಧಾರಿತ ಜಮೀನುಗಳನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವ ಕಾರ್ಯಕ್ರಮದಡಿ ರೂ.78.23 ಕೋಟಿ ವೆಚ್ಚ ಭರಿಸಲಾಗಿದೆ.
- ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ವಿವಿಧ ಕೃಷಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ರೂ.77.43 ಕೋಟಿ ವೆಚ್ಚ ಭರಿಸಲಾಗಿದೆ.
- ಕೃಷಿ ವಿಶ್ವ ವಿದ್ಯಾಲಯಗಳಲ್ಲಿ ವಿಜ್ಞಾನ ಕೋರ್ಸ್‌ಗಳಲ್ಲಿ ಅಧ್ಯಯನ ಮಾಡುತ್ತಿರುವ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್, ಪುಸ್ತಕಗಳು, ಶುಲ್ಕ ಮರುಪಾವತಿ ಮತ್ತು ವಿದ್ಯಾರ್ಥಿವೇತನ ಸೌಲಭ್ಯ ನೀಡಲಾಗಿದೆ.
- ಜಲಾನಯನ ಇಲಾಖೆಯಿಂದ ಜಲಾನಯನ ಅಭಿವೃದ್ಧಿ ಯೋಜನೆಯಡಿ ನಿರ್ದಿಷ್ಟ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಜಮೀನು ಅಭಿವೃದ್ಧಿ ಪಡಿಸಿ, ಮಣ್ಣಿನ ತೇವಾಂಶ ಹೆಚ್ಚಿಸುವ ಕಾರ್ಯಕ್ರಮಗಳಿಗೆ ಅನುದಾನ ಒದಗಿಸಲಾಗಿದೆ.
- ಎಸ್.ಸಿ./ಎಸ್.ಟಿ. ರೈತರಿಗೆ ಉಚಿತವಾಗಿ ತರಬೇತಿ ಮತ್ತು ಪ್ರಾಯೋಗಿಕ ತಾಕುಗಳಲ್ಲಿ ಬೆಳೆ ಬೆಳೆಯುವ ಸೌಲಭ್ಯ ನೀಡಲಾಗಿದೆ.

ಕೃಷಿ ಇಲಾಖೆಯಲ್ಲಿ ಮೇಲ್ಕಂಡ ವಿವಿಧ ಕಾರ್ಯಕ್ರಮಗಳಲ್ಲಿ 9.57 ಲಕ್ಷ ಪರಿಶಿಷ್ಟ ಜಾತಿ ಮತ್ತು 5.10 ಲಕ್ಷ ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸಹಾಯಧನ ಮತ್ತು ಸೌಲಭ್ಯ ಕಲ್ಪಿಸಲಾಗಿದೆ.

**ತೋಟಗಾರಿಕೆ :**

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 86.82 | 78.75 | 91 |
| ಟಿ.ಎಸ್.ಪಿ | 38.39 | 30.39 | 80 |

- ಒಟ್ಟು ಶೇ.೮೫ ಅನುದಾನ ವೆಚ್ಚವಾಗಿರುತ್ತದೆ.

**<u>ಪ್ರಮುಖ ಕಾರ್ಯಕ್ರಮಗಳು:</u>**

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಫಲಾನುಭವಿಗಳಗೆ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಮತ್ತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ತೋಟಗಾರಿಕೆ ಕಾರ್ಯಕ್ರಮಗಳಗೆ ಶೇ.೯೦ ರಷ್ಟು ಸಹಾಯಧನ ನೀಡಲಾಗಿದೆ.
- ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನದ ಕೆಳಗೆ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗಕ್ಕೆ ಹನಿ ಮತ್ತು ತುಂತರು ನೀರಾವರಿ ಘಟಕಗಳನ್ನು ಅಳವಡಿಸಲು ಶೇ. ೯೦ರಷ್ಟು ಸಹಾಯಧನ ನೀಡಲಾಗಿದೆ.
- ಸಮಗ್ರ ತೋಟಗಾರಿಕೆ ಅಭಿವೃದ್ಧಿ ಕಾರ್ಯಕ್ರಮದಡಿ ಹೊಸ ಪ್ರದೇಶ ವಿಸ್ತರಣೆ, ನಿರ್ವಹಣೆ, ಕೊಯ್ಲೋತ್ತರ ನಿರ್ವಹಣೆ ಘಟಕ, ನೀರು ಸಂಗ್ರಹಣಾ ಘಟಕ ಮತ್ತು ಇತರೆ ಘಟಕಗಳಡಿ ಶೇ.೯೦ರಷ್ಟು ಸಹಾಯಧನ ನೀಡಲಾಗಿದೆ.
- ಫಲಾನುಭವಿಗಳಗೆ ಬೀಜ ವಿತರಣೆ ಹಂತದಿಂದ ಮಾರುಕಟ್ಟೆ ಹಂತದವರೆಗೆ ಬೆಂಬಲ ನೀಡುವುದು.
- ತೋಟಗಾರಿಕೆ ವಿಶ್ವವಿದ್ಯಾಲಯದ ಮೂಲಕ ರಾಜ್ಯದಲ್ಲಿ ತೋಟಗಾರಿಕೆ ವಿಜ್ಞಾನ ಅಧ್ಯಯನ ಮಾಡುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಗೆ ಲ್ಯಾಪ್‌ಟಾಪ್ ವಿತರಣೆ ಮಾಡಲಾಗಿದೆ.

ತೋಟಗಾರಿಕೆ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 19763 ಪರಿಶಿಷ್ಟ ಜಾತಿ ಮತ್ತು 8635 ಪರಿಶಿಷ್ಟ ಪಂಗಡ ಫಲಾನುಭವಿಗಳಗೆ ಸೌಲಭ್ಯ ಕಲ್ಪಿಸಲಾಗಿದೆ.

**ರೇಷ್ಮೆ ಇಲಾಖೆ :**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 29.22 | 26.15 | 90 |
| ಟಿ.ಎಸ್.ಪಿ | 10.88 | 10.54 | 99 |

**(ರೂ.ಕೋಟಿಗಳಲ್ಲಿ)**

- ಒಟ್ಟು ಶೇ.೯೫ ಅನುದಾನ ವೆಚ್ಚವಾಗಿರುತ್ತದೆ. .

**<u>ಪ್ರಮುಖ ಕಾರ್ಯಕ್ರಮಗಳು:</u>**

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಹಿಪ್ಪನೇರಳೆ ಬೆಳೆಸುವ ರೈತರಿಗೆ ಸಹಾಯಧನ ನೀಡಲಾಗಿದೆ.
- ಹುಳು ಸಾಕಣೆ ಮನೆ ನಿರ್ಮಾಣಕ್ಕೆ ಸಹಾಯಧನ ನೀಡಲಾಗಿದೆ.
- ಚಾಕಿ ತೋಟ ನಿರ್ವಹಣೆ ಹಾಗೂ ರೇಷ್ಮೆ ಗೂಡಿನ ದರ ಕುಸಿತವಾದಾಗ ರಕ್ಷಣಾತ್ಮಕ ದರ ನೀಡಲು ವಿನಿಯೋಗಿಸಲಾಗಿದೆ.

ರೇಷ್ಮೆ ಇಲಾಖೆಯಲ್ಲಿ ಮೇಲ್ಕಂಡ ವಿವಿಧ ಕಾರ್ಯಕ್ರಮಗಳಲ್ಲಿ 5521 ಪರಿಶಿಷ್ಟ ಜಾತಿ ಮತ್ತು 3005 ಪರಿಶಿಷ್ಟ ಪಂಗಡ ಫಲಾನುಭವಿಗಳಗೆ ಸಹಾಯಧನ ಸೌಲಭ್ಯ ಕಲ್ಪಿಸಲಾಗಿದೆ.

## ಪಶು ಸಂಗೋಪನಾ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 119.92 | 115.02 | 96 |
| ಟಿ.ಎಸ್.ಪಿ | 96.01 | 46.99 | 96 |

- ಒಟ್ಟು ಶೇ.96 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಸದಸ್ಯರು ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಪೂರೈಕೆ ಮಾಡುವ ಹಾಲಿಗೆ ಕೆ.ಎಂ.ಎಫ್. ಮೂಲಕ ಪ್ರತಿ ಲೀಟರ್‌ಗೆ ರೂ. 4/- ಪ್ರೋತ್ಸಾಹಧನ ನೀಡಲು ರೂ.113.54 ಕೋಟಿ ವೆಚ್ಚ ಭರಿಸಲಾಗಿದೆ.
- ಹೈನುಗಾರಿಕೆ ಯೋಜನೆಯಡಿ ಎರಡು ಹಸು/ ಎಮ್ಮೆ ಖರೀದಿಸಲು ಶೇ. 50 ರಷ್ಟು ಸಹಾಯಧನ ಮತ್ತು ವಿಮಾ ಸೌಕರ್ಯ ನೀಡಲಾಗಿದೆ.
- ಕುರಿ/ ಮೇಕೆ ಸಾಕಾಣಿಕೆಗೆ ಶೇ. 50 ರಷ್ಟು ಸಹಾಯಧನ ನೀಡಲಾಗಿದೆ.
- ಜಾನುವಾರುಗಳಿಗೆ ರೋಗನಿರೋಧಕ ಲಸಿಕೆಗಳು ಹಾಗೂ ಪಶು ವೈದ್ಯಕೀಯ ವೆಚ್ಚ ನೀಡಲಾಗಿದೆ.
- ಬೀದರ್ ಪಶು ವೈದ್ಯಕೀಯ ವಿಶ್ವವಿದ್ಯಾಲಯದ ಮೂಲಕ ರಾಜ್ಯದಲ್ಲಿ ಪಶು ವೈದ್ಯಕೀಯ ವಿಜ್ಞಾನ ಅಧ್ಯಯನ ಮಾಡುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಲಾಗಿದೆ.
- ಕುರಿ/ ಮೇಕೆ ಆಕಸ್ಮಿಕ ಮರಣಕ್ಕೆ ತುತ್ತಾದಲ್ಲಿ ರೂ.5000/- ಪರಿಹಾರ ನೀಡಲಾಗಿದೆ.

ಪಶುಸಂಗೋಪನೆ ಇಲಾಖೆಯಲ್ಲಿ ಮೇಲ್ಕಂಡ ವಿವಿಧ ಕಾರ್ಯಕ್ರಮಗಳಲ್ಲಿ 91542 ಪರಿಶಿಷ್ಟ ಜಾತಿ ಮತ್ತು 45134 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಮೀನುಗಾರಿಕೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 17.75 | 16.48 | 93 |
| ಟಿ.ಎಸ್.ಪಿ | 6.22 | 5.87 | 94 |

- ಒಟ್ಟು ಶೇ.93 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ ಮತ್ತು ಪಂಗಡದ ಮೀನುಗಾರರಿಗೆ ಮನೆ ನಿರ್ಮಾಣ ಮಾಡಲು ಮತ್ಸ್ಯಾಶ್ರಯ ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ರೂ. 1.50 ಲಕ್ಷ ಮತ್ತು ನಗರಪ್ರದೇಶದಲ್ಲಿ ರೂ. 1.80 ಲಕ್ಷ ಘಟಕ ಸಹಾಯಧನ ನೀಡಲಾಗಿದೆ.
- ಜಲಾಶಯದಲ್ಲಿ ಮೀನು ಮರಿ ಬಿತ್ತನೆ, ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್ ಹರಿಗೋಲು ವಿತರಣೆ, ಮೀನುಕೊಳ ನಿರ್ಮಾಣಕ್ಕೆ ಸಹಾಯಧನ ನೀಡಲಾಗಿದೆ.
- ಮೀನುಗಾರಿಕೆ ದೋಣಿಗಳಿಗೆ ಡೀಸೆಲ್ ಮಾರಾಟ ತೆರಿಗೆ ಮರುಪಾವತಿ ಮಾಡಲಾಗಿದೆ.

ಮೀನುಗಾರಿಕೆ ಇಲಾಖೆಯಲ್ಲಿ ಮೇಲ್ಕಂಡ ವಿವಿಧ ಕಾರ್ಯಕ್ರಮಗಳಲ್ಲಿ 1216 ಪರಿಶಿಷ್ಟ ಜಾತಿ ಮತ್ತು 723 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಸಾರಿಗೆ ಇಲಾಖೆ

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 0.18 | 0.18 | 100 |
| ಟಿ.ಎಸ್.ಪಿ | 0.07 | 0.06 | 86 |

- ಒಟ್ಟು ಶೇ.93 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ವಾಹನ ಚಾಲನಾ ತರಬೇತಿ ಕಾರ್ಯಕ್ರಮದಲ್ಲಿ ಪರಿಶಿಷ್ಟ ಜಾತಿ/ಪ.ವರ್ಗದ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ.

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 1524.11 | 1524.11 | 100 |
| ಟಿ.ಎಸ್.ಪಿ | 596.78 | 596.78 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ /ಪ.ಪಂಗಡದ ಕುಟುಂಬಗಳಿಗೆ ಸ್ವಚ್ಛ ಭಾರತ ಅಭಿಯಾನದಡಿ 103 ಲಕ್ಷ ಪರಿಶಿಷ್ಟ ಜಾತಿ ಕುಂಟುಬಗಳಿಗೆ ಮತ್ತು 0.49 ಲಕ್ಷ ಪರಿಶಿಷ್ಟ ಪಂಗಡಗಳ ಕುಟುಂಬಗಳಿಗೆ ರೂ.147.32 ಕೋಟಿ ವೆಚ್ಚದಲ್ಲಿ ವೈಯಕ್ತಿಕ ಶೌಚಾಲಯಗಳ ನಿರ್ಮಾಣಕ್ಕೆ ಸಹಾಯಧನ ನೀಡಲಾಗಿದೆ.
- ಸುವರ್ಣ ಗ್ರಾಮ ಯೋಜನೆಯಡಿಯಲ್ಲಿ 2981 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾಲೋನಿಗಳಲ್ಲಿ ರೂ.108.46 ಕೋಟಿ ವೆಚ್ಚದಲ್ಲಿ ಸಿ.ಸಿ.ರಸ್ತೆ, ಚರಂಡಿ ನಿರ್ಮಿಸಲಾಗಿದೆ.
- ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ 159 ಕಿಲೋಮೀಟರ್ ಸಂಪರ್ಕ ರಸ್ತೆಗಳನ್ನು ನಿರ್ಮಿಸಲಾಗಿದೆ.
- ಗ್ರಾಮೀಣ ನೀರು ಸರಬರಾಜು ಯೋಜನೆಯಡಿ 213 ಒವರ್ ಹೆಡ್ ಟ್ಯಾಂಕ್‌ಗಳನ್ನು ರೂ.474.20 ಕೋಟಿ ವೆಚ್ಚದಲ್ಲಿ ನಿರ್ಮಿಸಿ, ಕುಡಿಯುವ ನೀರಿನ ಸಂಪರ್ಕ ಒದಗಿಸಲಾಗಿದೆ.

## ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 26.61 | 26.45 | 100 |
| ಟಿ.ಎಸ್.ಪಿ | 28.31 | 28.22 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಹುಲಿ ಮೀಸಲು ಮತ್ತು ರಾಷ್ಟ್ರೀಯ ಉದ್ಯಾನವನಗಳಿಂದ 132 ಪರಿಶಿಷ್ಟ ಪಂಗಡದ ಕುಟುಂಬಗಳನ್ನು ಹೊರತಂದು ಪುನರ್ವಸತಿ ಕಲ್ಪಿಸಲು ತಲಾ 10 ಲಕ್ಷ ಧನಸಹಾಯದಂತೆ ರೂ.16.90 ಕೋಟಿ ವೆಚ್ಚ ಭರಿಸಲಾಗಿದೆ.
- ಪರಿಶಿಷ್ಟ ಜಾತಿ ಮತ್ತು ಪಂಗಡದ ಅರಣ್ಯ ವಾಸಿಗಳಿಗೆ ಎಲ್‌ಪಿಜಿ ಸ್ಟೌವ್, ರೆಗ್ಯುಲೇಟರ್ ಮತ್ತು ಸಿಲಿಂಡರ್ ಸರಬರಾಜು ಮಾಡಲಾಗಿದೆ.
- ಮನೆಗಳಿಗೆ ಸೋಲಾರ್ ವಾಟರ್‌ಹೀಟರ್, ಸೋಲಾರ್ ದೀಪ ಅಳವಡಿಕೆ, ಬಯೋ ಗ್ಯಾಸ್, ಸರಳ ಒಲೆ ನಿರ್ಮಾಣ ಮತ್ತು ಜೇನು ಸಾಕಾಣಿಕೆ ಪೆಟ್ಟಿಗೆಗಳ ವಿತರಣೆ ಮಾಡಲಾಗಿದೆ.
- ರಸ್ತೆ ಬದಿಯಲ್ಲಿ ನಡುತೋಪು ನಿರ್ವಹಣೆ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗಿದೆ.

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಯಲ್ಲಿ ಮೇಲ್ಕಂಡ ವಿವಿಧ ಕಾರ್ಯಕ್ರಮಗಳಲ್ಲಿ 39608 ಪರಿಶಿಷ್ಟ ಜಾತಿ ಮತ್ತು 17093 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ನೀಡಲಾಗಿದೆ.

## ಸಹಕಾರ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 79.99 | 67.03 | 80 |
| ಟಿ.ಎಸ್.ಪಿ | 52.62 | 48.74 | 93 |

- ಒಟ್ಟು ಶೇ.87 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ 2.71 ಲಕ್ಷ ರೈತರು ಪಡೆದ ಕೃಷಿ ಸಾಲಕ್ಕೆ ಬಡ್ಡಿ ಸಹಾಯಧನ ನೀಡಲು ರೂ.69.56 ಕೋಟಿ ವೆಚ್ಚ ಭರಿಸಲಾಗಿದೆ.
- ಸಹಕಾರ ಸಂಘಗಳಲ್ಲಿ ಸದಸ್ಯತ್ವ ನೋಂದಾವಣೆ ಯೋಜನೆಯಡಿ 75334 ಪ.ಜಾತಿ ಹಾಗೂ 40339 ಪ.ಪಂಗಡದವರನ್ನು ಸದಸ್ಯರನ್ನಾಗಿ ನೋಂದಾಯಿಸಲಾಗಿದೆ.
- ಸಹಕಾರ ಸಂಘಗಳಲ್ಲಿ ಸದಸ್ಯತ್ವ ಹೊಂದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರಿಗೆ "ಯಶಸ್ವಿನಿ"ಯೋಜನೆಯಡಿ ಗ್ರಾಮೀಣ ರೈತರು ರೂ.50/- ನಗರ ಪ್ರದೇಶಗಳ ರೈತರಿಗೆ ರೂ.110/- ವಂತಿಕೆಯನ್ನು ಭರಿಸಲಾಗಿದ್ದು, 5479 ಪ.ಜಾತಿ ಹಾಗೂ 2675 ಪ.ಪಂಗಡದ ಸದಸ್ಯರಿಗೆ ಸೌಲಭ್ಯ ಕಲ್ಪಿಸಲಾಗಿದೆ.
- ಪರಿಶಿಷ್ಟ ಪಂಗಡ ಉಪಯೋಜನೆಯಡಿ 3 ಲ್ಯಾಂಪ್ಸ್ ಸಹಕಾರ ಸಂಘಗಳಿಗೆ ರೂ.50.00 ಲಕ್ಷ ಧನಸಹಾಯ ನೀಡಲಾಗಿದೆ.

ಸಹಕಾರ ಇಲಾಖೆಯಲ್ಲಿ ಮೇಲ್ಕಂಡ ವಿವಿಧ ಕಾರ್ಯಕ್ರಮಗಳಲ್ಲಿ ಪರಿಶಿಷ್ಟ ಜಾತಿ 248457 ಮತ್ತು 161167 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 306.54 | 287.79 | 94 |
| ಟಿ.ಎಸ್.ಪಿ | 116.89 | 112.66 | 96 |

- ಒಟ್ಟು ಶೇ. 95 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ 29835 ಸ್ವಸಹಾಯ ಸ್ತ್ರೀಶಕ್ತಿ ಗುಂಪುಗಳಿಗೆ ತಲಾ ರೂ.5000/- ಸುತ್ತು ನಿಧಿ ಕಾರ್ಯಕ್ರಮದಡಿ ರೂ.15.27 ಕೋಟಿ ವೆಚ್ಚ ಭರಿಸಲಾಗಿದೆ.
- ಉದ್ಯೋಗಿನಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ 50000/- ರೂ.ಗಳಂತೆ ಸಹಾಯಧನ ಒದಗಿಸಲಾಗಿದೆ.
- ಚೇತನ ಕಾರ್ಯಕ್ರಮದಡಿ ಲೈಂಗಿಕ ಕಾರ್ಯಕರ್ತೆಯರಿಗೆ ಸ್ವಯಂ ಉದ್ಯೋಗದ ಮೂಲಕ ಸ್ವಾವಲಂಬನೆಯ ಜೀವನ ನಡೆಸಲು ಅನುಕೂಲವಾಗುವಂತೆ ರೂ. 20000/- ಪ್ರೋತ್ಸಾಹಧನ ಮತ್ತು ತಲಾ 1500/- ರೂ.ಗಳ ವೆಚ್ಚದಲ್ಲಿ ಉದ್ಯಮಶೀಲತಾ ತರಬೇತಿ ನೀಡಲಾಗಿದೆ.
- ಕೆ.ಎಸ್.ಎಫ್.ಸಿ.ಯಿಂದ ಸಾಲ ಪಡೆದ ಮಹಿಳಾ ಉದ್ದಿಮೆದಾರರಿಗೆ ಶೇ.4 ಬಡ್ಡಿದರದಲ್ಲಿ ಸಾಲ ನೀಡಲಾಗಿದೆ. ಉಳಿದ ಶೇ.10 ರಷ್ಟು ಬಡ್ಡಿಯನ್ನು ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಭರಿಸುತ್ತದೆ.
- 24933 ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಅಂಗವಿಕಲರಿಗೆ ರೂ.14.96 ಕೋಟಿ ವೆಚ್ಚದಲ್ಲಿ ಮಾಸಿಕ ಪಿಂಚಣಿ ನೀಡಲಾಗಿದೆ.
- ಅಂಗವಿಕಲರಿಗೆ ವಿದ್ಯಾರ್ಥಿ ವೇತನ, ಸಲಕರಣೆ ವಿತರಣೆ, ಸ್ವಯಂ ಸೇವಾ ಸಂಸ್ಥೆಯ ಮೂಲಕ ತರಬೇತಿ, ನಿರುದ್ಯೋಗ ಭತ್ಯೆ ಹಾಗೂ ದೈಹಿಕ ಮತ್ತು ಮಾನಸಿಕವಾಗಿ ಸವಾಲುಗಳಿಗೆ ಒಳಗಾದವರಿಗೆ ಧನ ಸಹಾಯ ನೀಡಲಾಗಿದೆ.
- ಭಾಗ್ಯಲಕ್ಷ್ಮಿ ಯೋಜನೆಯಡಿ ಪ.ಜಾತಿಯ 32510 ಹಾಗೂ ಪ.ಪಂಗಡದ 15785 ಫಲಾನುಭವಿಗಳಿಗೆ ರೂ.129.29 ಕೋಟಿ ವೆಚ್ಚದಲ್ಲಿ ಸೌಲಭ್ಯ ಕಲ್ಪಿಸಲಾಗಿದೆ.
- ಅಪೌಷ್ಠಿಕ ಮಕ್ಕಳ ವೈದ್ಯಕೀಯ ವೆಚ್ಚ ಭರಿಸುವ "ಬಾಲ ಸಂಜೀವಿನಿ" ಯೋಜನೆಯಡಿ ಔಷಧೋಪಚಾರ, ಚಿಕಿತ್ಸೆ, ಪೌಷ್ಠಿಕ ಆಹಾರಕ್ಕಾಗಿ ಪ.ಜಾತಿಯ 7193 ಹಾಗೂ ಪ.ಪಂಗಡದ 2124 ಮಕ್ಕಳಿಗೆ ಸೌಲಭ್ಯ ನೀಡಲಾಗಿದೆ.
- ಗುರುತಿಸಲ್ಪಟ್ಟ ದೇವದಾಸಿ ಮಹಿಳೆಯರ ಪುನರ್ವಸತಿ ಕಾರ್ಯಕ್ರಮದಡಿ 27889 ದೇವದಾಸಿಯರಿಗೆ ಮಾಸಿಕ ರೂ. 1000/- ಮಾಸಾಶನ ನೀಡಲು ರೂ.39.09 ಕೋಟಿ ವೆಚ್ಚ ಭರಿಸಲಾಗಿದೆ.
- ದೇವದಾಸಿಯರ ವಸತಿ ನಿರ್ಮಾಣಕ್ಕೆ ಗ್ರಾಮೀಣ ಪ್ರದೇಶದಲ್ಲಿ ಘಟಕ ವೆಚ್ಚ ರೂ.1.50 ಲಕ್ಷ ಹಾಗೂ ನಗರ ಪ್ರದೇಶಗಳಲ್ಲಿ ಘಟಕ ವೆಚ್ಚ ರೂ.1.80 ಲಕ್ಷ ಸಹಾಯಧನ ನೀಡುವ ಕಾರ್ಯಕ್ರಮದಡಿ 1322 ಮನೆಗಳಿಗೆ ಮಂಜೂರಾತಿ ನೀಡಲಾಗಿದೆ.
- ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ ಅನುದಾನ ನೀಡಲಾಗಿದೆ.
- ಅಂಗನವಾಡಿ ಮಕ್ಕಳ ಪೌಷ್ಠಿಕ ಆಹಾರ (ಐ.ಸಿ.ಡಿ.ಎಸ್) ಯೋಜನೆಯಡಿ ರೂ.158.99 ಕೋಟಿ ವೆಚ್ಚದಲ್ಲಿ ಪ.ಜಾತಿಯ 10.83 ಲಕ್ಷ ಹಾಗೂ ಪ.ಪಂಡದ 7.55 ಲಕ್ಷ ಮಕ್ಕಳಿಗೆ ಪೌಷ್ಠಿಕ ಆಹಾರ ಒದಗಿಸಲಾಗಿದೆ.

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 2.40 | 2.40 | 100 |
| ಟಿ.ಎಸ್.ಪಿ | 0.30 | 0.29 | 96.66 |

- ಒಟ್ಟು ಶೇ.98 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮಾಲಿಕತ್ವ/ ಸಂಪಾದಕತ್ವದ ಪತ್ರಿಕೆಗಳಿಗೆ ಜಾಹೀರಾತು ನೀಡಲಾಗಿದೆ.

- ಪತ್ರಿಕೋದ್ಯಮ ಕೋರ್ಸ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್/ಕ್ಯಾಮರ ವಿತರಣೆ ಮಾಡಲಾಗಿದೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಮೇಲ್ಕಂಡ ವಿವಿಧ ಕಾರ್ಯಕ್ರಮಗಳಲ್ಲಿ 110 ಪರಿಶಿಷ್ಟ ಜಾತಿ ಮತ್ತು 110 ಪರಿಶಿಷ್ಟ ಪಂಗಡ ಜನರಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಪ್ರವಾಸೋದ್ಯಮ ಇಲಾಖೆ:

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 22.49 | 22.49 | 100 |
| ಟಿ.ಎಸ್.ಪಿ | 10.34 | 10.34 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ರಾಜ್ಯದ ಸರ್ಕಾರಿ ಪ್ರೌಢಶಾಲೆಯ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ 9228 ವಿದ್ಯಾರ್ಥಿಗಳಿಗೆ ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ.
- ರಾಜ್ಯದ 30 ಜಿಲ್ಲೆಯ ಅರ್ಹ 750 ಪರಿಶಿಷ್ಟ ಜಾತಿ ಮತ್ತು 323 ಪರಿಶಿಷ್ಟ ಪಂಗಡದ ವಿದ್ಯಾವಂತ ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಕಲ್ಪಿಸಲು ಪ್ರವಾಸಿ ಟ್ಯಾಕ್ಸಿ ಯೋಜನೆಯಡಿ ಶೇ.50 ರಷ್ಟು ಸಹಾಯಧನ ನೀಡಲಾಗಿದೆ.

ಪ್ರವಾಸೋದ್ಯಮ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 8411 ಪರಿಶಿಷ್ಟ ಜಾತಿ ಮತ್ತು 1979 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 17.13 | 11.06 | 65 |
| ಟಿ.ಎಸ್.ಪಿ | 6.93 | 4.08 | 59 |

- ಒಟ್ಟು ಶೇ.62 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ಪ್ರೋತ್ಸಾಹಧನ ಹಾಗೂ ಜಿಮ್ ಸ್ಥಾಪನೆ ಮಾಡಲು ಸಲಕರಣೆ ಖರೀದಿಗೆ ಹಾಗೂ ಕ್ರೀಡಾಂಗಣಕ್ಕೆ ಸಹಾಯಧನ ನೀಡಲಾಗಿದೆ.
- ಸಮಾಜ ಕಲ್ಯಾಣ/ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳ ವಸತಿ ಶಾಲೆಗಳಿಗೆ ಮತ್ತು ವಿದ್ಯಾರ್ಥಿನಿಲಯಗಳಿಗೆ ಕ್ರೀಡಾ ಸಾಮಾಗ್ರಿಗಳ ಸರಬರಾಜು ಮಾಡಲಾಗಿದೆ.
- ರಾಜ್ಯ/ ರಾಷ್ಟ್ರ/ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ತರಬೇತಿ/ ಕ್ರೀಡಾ ಸಲಕರಣೆ/ ಪ್ರಯಾಣ ಭತ್ಯೆ/ ದಿನ ಭತ್ಯೆಗಳನ್ನು ನೀಡಲಾಗಿದೆ.
- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಯುವಕ-ಯುವತಿಯವರಿಗೆ ಕ್ರೀಡಾ ಕೌಶಲ್ಯ ತರಬೇತಿ ನೀಡಲಾಗಿದೆ.

ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 2980 ಪರಿಶಿಷ್ಟ ಜಾತಿ ಮತ್ತು 1001 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಕಂದಾಯ ಇಲಾಖೆ (ಸಾಮಾಜಿಕ ಭದ್ರತೆ)

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 345.57 | 345.57 | 100 |
| ಟಿ.ಎಸ್.ಪಿ | 84.93 | 83.45 | 98 |

- ಒಟ್ಟು ಶೇ.99 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಬಡತನ ರೇಖೆಗಿಂತ ಕೆಳಗಿರುವ, ವಯಸ್ಸಾದ ಹಿರಿಯ ನಾಗರಿಕರಿಗೆ, ವಿಧವೆಯರಿಗೆ ಹಾಗೂ ವಿಕಲಚೇತನರಿಗೆ ಮಾಸಿಕ ಪಿಂಚಣಿ ನೀಡಲಾಗಿದೆ.
- "ರಾಷ್ಟ್ರೀಯ ಕುಟುಂಬ ಸೌಲಭ್ಯ ಯೋಜನೆ"ಯಡಿ 18 ರಿಂದ 59 ವರ್ಷ ವಯೋಮಿತಿಯ ದುಡಿಯುವ ಕುಟುಂಬದ ಮುಖ್ಯಸ್ಥ ಮರಣ ಹೊಂದಿದಲ್ಲಿ ರೂ.20000/- ಧನಸಹಾಯ ನೀಡಲಾಗಿದೆ.
- "ರಾಷ್ಟ್ರೀಯ ಕುಟುಂಬ ಸೌಲಭ್ಯ ಯೋಜನೆ"ಯಡಿ ಅಂತ್ಯ ಸಂಸ್ಕಾರ ವೆಚ್ಚಕ್ಕಾಗಿ ತಲಾ ರೂ.1000/- ಧನ ಸಹಾಯ ನೀಡಲಾಗಿದೆ.
- ಶ್ರೀ ಸಾಮಾನ್ಯ ವಿಮಾ ಯೋಜನೆಯಡಿ 18 ರಿಂದ 59 ವರ್ಷ ವಯೋಮಿತಿಯ ಬಡತನ ರೇಖೆಗಿಂತ ಕೆಳಗಿರುವ 72 ವಿವಿಧ ಕಸುಬುಗಳಡಿ ಬರುವ ಕುಟುಂಬಗಳಿಗೆ ವಿಮಾ ಸುರಕ್ಷಾ ಸೌಲಭ್ಯ ಒದಗಿಸಲಾಗಿದೆ.
- ಆರಾಧನಾ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ದೇವಾಲಯ ನಿರ್ಮಾಣ/ಜೀರ್ಣೋದ್ಧಾರ ಕಾರ್ಯಕ್ರಮಗಳಿಗಾಗಿ ರೂ.25.60 ಕೋಟಿ ವೆಚ್ಚ ಭರಿಸಲಾಗಿದೆ.

ಕಂದಾಯ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 8.25 ಲಕ್ಷ ಪರಿಶಿಷ್ಟ ಜಾತಿ ಮತ್ತು 2.00 ಲಕ್ಷ ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 5.80 | 5.80 | 100 |
| ಟಿ.ಎಸ್.ಪಿ | 2.32 | 2.32 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.
- ಪ.ಜಾತಿ/ಪ.ಪಂಗಡದ ಅಭ್ಯರ್ಥಿಗಳಿಗೆ ಕಿಯೋನಿಕ್ಸ್ ಸಂಸ್ಥೆಯ ಮೂಲಕ 598 ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ.

## ವಸತಿ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 1602.10 | 1599.65 | 100 |
| ಟಿ.ಎಸ್.ಪಿ | 705.90 | 705.82 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.

**<u>ಪ್ರಮುಖ ಕಾರ್ಯಕ್ರಮಗಳು:</u>**

- ಆಶ್ರಯ, ಬಸವ ವಸತಿ ಮತ್ತು ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಗ್ರಾಮೀಣ/ನಗರ ಪ್ರದೇಶದಲ್ಲಿ ಮತ್ತು ಡಾ:.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯಡಿ ಗ್ರಾಮೀಣ ಪ್ರದೇಶಗಳಲ್ಲಿ ರೂ. 1.50 ಲಕ್ಷ ಹಾಗೂ ನಗರ ಪ್ರದೇಶಗಳಲ್ಲಿ ರೂ.1.80 ಲಕ್ಷ ಘಟಕ ವೆಚ್ಚ ನಿಗದಿಪಡಿಸಲಾಗಿದೆ.
- ವಸತಿ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 76800 ಮನೆಗಳನ್ನು ಪರಿಶಿಷ್ಟ ಜಾತಿ ಮತ್ತು 38912 ಮನೆಗಳನ್ನು ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ನಿರ್ಮಿಸಲಾಗಿದೆ.

## ಉನ್ನತ ಶಿಕ್ಷಣ ಇಲಾಖೆ

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 103.59 | 79.86 | 77 |
| ಟಿ.ಎಸ್.ಪಿ | 37.93 | 33.47 | 89 |

- ಒಟ್ಟು ಶೇ.80 ಅನುದಾನ ವೆಚ್ಚಮಾಡಲಾಗಿದೆ.

**<u>ಪ್ರಮುಖ ಕಾರ್ಯಕ್ರಮಗಳು:</u>**

- ಶಿಕ್ಷಣ ಗುಣಮಟ್ಟ ಸುಧಾರಿಸಲು ಇಂಜಿನಿಯರಿಂಗ್ ಕಾಲೇಜುಗಳಿಗೆ ಉಪಕರಣಗಳನ್ನು ಒದಗಿಸಲಾಗಿದೆ.
- 5380 ಪ.ಜಾತಿ/ಪ.ಪಂಗಡದ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಮಾಡಲಾಗಿದೆ.
- ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪಿ.ಹೆಚ್.ಡಿ. ವಿದ್ಯಾರ್ಥಿಗಳಿಗೆ ಸ್ಟೈಫೆಂಡ್ ನೀಡಲಾಗಿದೆ.
- ವಿಶ್ವವಿದ್ಯಾಲಯಗಳಿಗೆ ನೀಡಲಾಗುವ ಅನುದಾನದಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಭೋಜನಾ ವೆಚ್ಚ ಭರಿಸಲಾಗಿದೆ.
- ವಿಜ್ಞಾನ ಕೋರ್ಸ್‌ಗಳಿಗೆ ಪ್ರವೇಶ ಪಡೆದ ಪ್ರತಿಭಾವಂತ ಪದವಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗಿದೆ.
- 9 ಮಹಿಳಾ ಪಾಲಿಟೆಕ್ನಿಕ್ ಹಾಸ್ಟೆಲ್ ಕಟ್ಟಡ ಮತ್ತು 31 ಕಾಲೇಜು ಹಾಸ್ಟೆಲ್ ಕಟ್ಟಡಗಳನ್ನು ನಿರ್ಮಿಸಲು ಕ್ರಮವಹಿಸಲಾಗಿದೆ.

## ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಇಲಾಖೆ

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 693.18 | 641.25 | 92 |
| ಟಿ.ಎಸ್.ಪಿ | 283.11 | 264.18 | 94 |

- ಒಟ್ಟು ಶೇ.93 ಅನುದಾನ ವೆಚ್ಚಮಾಡಲಾಗಿದೆ.

**<u>ಪ್ರಮುಖ ಕಾರ್ಯಕ್ರಮಗಳು:</u>**

- ವಿದ್ಯಾ ವಿಕಾಸ ಯೋಜನೆಯಡಿ 11.95 ಲಕ್ಷ ಪ.ಜಾತಿ ಮತ್ತು 5.20 ಲಕ್ಷ ಪ.ಪಂಗಡದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ, ಪಠ್ಯ ಪುಸ್ತಕ, ಸಮವಸ್ತ್ರ ಒದಗಿಸಲಾಗಿದೆ.
- 92000 ಪ.ಜಾತಿ ಮತ್ತು 41000 ಪ.ಪಂಗಡದ 8ನೇ ತರಗತಿ ವಿದ್ಯಾರ್ಥಿಗಳಿಗೆ ಬೈಸಿಕಲ್ ವಿತರಣೆ ಮಾಡಲಾಗಿದೆ.

- ಅಕ್ಷರ ದಾಸೋಹದಡಿ 11.44 ಲಕ್ಷ ಪ.ಜಾತಿ ಮತ್ತು 4.98 ಲಕ್ಷ ಪ.ಪಂಗಡದ ವಿದ್ಯಾರ್ಥಿಗಳಿಗೆ ರೂ.454.99 ಕೋಟಿ ವೆಚ್ಚದಲ್ಲಿ ಬಿಸಿಊಟ ಒದಗಿಸಲಾಗಿದೆ.
- ಎಸ್.ಎಸ್.ಎಲ್.ಸಿ./ಪಿ.ಯು.ಸಿ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಪಾವತಿ ಮಾಡಲಾಗಿದೆ.
- ಸರ್ವಶಿಕ್ಷಾ ಅಭಿಯಾನ ಕಾರ್ಯಕ್ರಮದಡಿ 9.64 ಲಕ್ಷ ಪರಿಶಿಷ್ಟ ಜಾತಿ ಮತ್ತು 5.24 ಲಕ್ಷ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿವಿಧ ಸೌಲಭ್ಯಗಳನ್ನು ಒದಗಿಸಲಾಗಿದೆ. ರೂ.43.60 ಕೋಟಿ ವೆಚ್ಚ ಭರಿಸಲಾಗಿದೆ.
- ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆಯಡಿ ಶಿಕ್ಷಣ ಗುಣಮಟ್ಟ ಹೆಚ್ಚಿಸುವ ಕಾರ್ಯಕ್ರಮ ಅನುಷ್ಠಾನ ಮಾಡಲಾಗಿದೆ.
- ಶಿಕ್ಷಣ ಹಕ್ಕು ಕಾಯ್ದೆಯಡಿ 28427 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ರೂ.113.54 ಕೋಟಿ ವೆಚ್ಚ ಭರಿಸಲಾಗಿದೆ.

## ಕೈಮಗ್ಗ ಮತ್ತು ಜವಳಿ ಇಲಾಖೆ

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 35.26 | 35.26 | 100 |
| ಟಿ.ಎಸ್.ಪಿ | 13.78 | 13.78 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ನೇಕಾರರಿಗೆ ವಸತಿ ಕಾರ್ಯಾಗಾರ ನಿರ್ಮಿಸಿಲು ಘಟಕ ವೆಚ್ಚ ರೂ.2.50 ಲಕ್ಷ ನಿಗದಿಪಡಿಸಿದ್ದು, ಸದರಿ ಮೊತ್ತದಲ್ಲಿ ಶೇ.90 ಸಹಾಯಧನ ಹಾಗೂ ಶೇ. 10 ಫಲಾನುಭವಿಗಳ ವಂತಿಕೆಯಿಂದ ಭರಿಸಲಾಗಿದೆ.
- ನೇಕಾರರಿಗೆ ರೂ. 30000/- ಘಟಕ ವೆಚ್ಚದಲ್ಲಿ ಕೈಮಗ್ಗ ಹಾಗೂ ಸಲಕರಣೆಗಳ ಸರಬರಾಜು ಮಾಡಲಾಗಿದೆ.
- ವಿದ್ಯುತ್ ಮಗ್ಗಗಳಿಗೆ ಶೇ.90 ರಷ್ಟು ಸಹಾಯಧನ ನೀಡಲಾಗಿದೆ.
- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಉದ್ದಿಮೆದಾರರು ಸ್ಥಾಪಿಸುವ ಸಿದ್ಧ ಉಡುಪು ಘಟಕಗಳಿಗೆ ಸಹಾಯಧನ ನೀಡಲಾಗಿದೆ.

ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 5622 ಪರಿಶಿಷ್ಟ ಜಾತಿ ಮತ್ತು 3358 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಭಾರಿ ಮತ್ತು ಮಧ್ಯಮ ಕೈಗಾರಿಕೆ ಇಲಾಖೆ

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 57.84 | 57.84 | 100 |
| ಟಿ.ಎಸ್.ಪಿ | 23.34 | 23.34 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಕೆ.ಐ.ಎ.ಡಿ.ಬಿ ಮತ್ತು ಕೆ.ಎಸ್.ಎಸ್.ಐ.ಡಿ.ಸಿ ವತಿಯಿಂದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಕೈಗಾರಿಕೋದ್ಯಮಿಗಳಿಗೆ ಕೈಗಾರಿಕಾ ಪ್ರದೇಶಗಳಲ್ಲಿ ನಿವೇಶನಕ್ಕಾಗಿ ಮತ್ತು ಶೆಡ್‌ಗಳಿಗೆ ಸಹಾಯಧನ ನೀಡಲಾಗಿದೆ.
- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಕುಶಲಕರ್ಮಿಗಳಿಗೆ ವಸತಿ ಕಾರ್ಯಾಗಾರ ನಿರ್ಮಿಸಿಲು ಘಟಕ ವೆಚ್ಚ ರೂ.2.50 ಲಕ್ಷ ನಿಗದಿಪಡಿಸಿದ್ದು ಸದರಿ ಮೊತ್ತದಲ್ಲಿ ಶೇ.೯೦ ಸಹಾಯಧನ ಹಾಗೂ ಶೇ. 10 ಫಲಾನುಭವಿಗಳ ವಂತಿಕೆಯಿಂದ ಭರಿಸಲಾಗಿದೆ.

ಭಾರಿ ಮತ್ತು ಮಧ್ಯಮ ಕೈಗಾರಿಕೆ ಇಲಾಖೆಯಲ್ಲಿ ಮೇಲ್ಕಂಡ ವಿವಿಧ ಕಾರ್ಯಕ್ರಮಗಳಲ್ಲಿ ೯೦5 ಪರಿಶಿಷ್ಟ ಜಾತಿ ಮತ್ತು 1616 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಸಣ್ಣ ಕೈಗಾರಿಕೆ ಇಲಾಖೆ

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 8.50 | 7.58 | 89 |
| ಟಿ.ಎಸ್.ಪಿ | 3.43 | 2.98 | 87 |

- ಒಟ್ಟು ಶೇ.೮೮ ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಸಣ್ಣ ಉದ್ಯಮಿದಾರರಿಗೆ ಮತ್ತು ಕುಶಲ ಕರ್ಮಿಗಳಿಗೆ ತರಬೇತಿ ಮತ್ತು ಟೂಲ್ ಕಿಟ್ ನೀಡಲಾಗಿದೆ.

ಸಣ್ಣ ಕೈಗಾರಿಕೆ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ೩074 ಪರಿಶಿಷ್ಟ ಜಾತಿ ಮತ್ತು 1016 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ನಗರಾಭಿವೃದ್ಧಿ ಇಲಾಖೆ

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 168.98 | 147.93 | 88 |
| ಟಿ.ಎಸ್.ಪಿ | 71.46 | 62.51 | 88 |

- ಒಟ್ಟು ಶೇ.೮೮ ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ನಗರ ಸ್ಥಳೀಯ ಸಂಸ್ಥೆಗಳಿಂದ ನಗರಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆ ಹೆಚ್ಚಿರುವ ಜನವಸತಿಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಲಾಗಿದೆ.
- ಕರ್ನಾಟಕ ನಗರ ನೀರು ಸರಬಾರಾಜು ಮತ್ತು ಒಳಚರಂಡಿ ಮಂಡಳಿ ಮತ್ತು ಬೆಂಗಳೂರು ನಗರ ನೀರು ಸರಬಾರಾಜು ಮತ್ತು ಒಳಚರಂಡಿ ಮಂಡಳಿಯಿಂದ ಕುಡಿಯುವ ನೀರಿನ ಸೌಲಭ್ಯ ಮತ್ತು ಒಳಚರಂಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.
- ರಾಜೀವ್ ಆವಾಸ್ ಯೋಜನೆಯಡಿ 15೩೦ ಪ.ಜಾತಿ ಮತ್ತು 16೩ ಪ.ಪಂಗಡದವರಿಗೆ ಮನೆಗಳನ್ನು ನಿರ್ಮಿಸಲಾಗಿದೆ.

* ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನಯಡಿಯಲ್ಲಿ 19841 ಪ.ಜಾತಿ ಮತ್ತು 9048 ಪ.ಪಂಗಡದ ಫಲಾನುಭವಿಗಳಿಗೆ ಧನಸಹಾಯ.

ನಗರಾಭಿವೃದ್ಧಿ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 27303 ಪರಿಶಿಷ್ಟ ಜಾತಿ ಮತ್ತು 4239 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಲೋಕೋಪಯೋಗಿ ಇಲಾಖೆ

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 582.20 | 581.23 | 100 |
| ಟಿ.ಎಸ್.ಪಿ | 234.76 | 230.94 | 98 |

* ಒಟ್ಟು ಶೇ.99 ಅನುದಾನ ವೆಚ್ಚಮಾಡಲಾಗಿದೆ.

**<u>ಪ್ರಮುಖ ಕಾರ್ಯಕ್ರಮಗಳು:</u>**

* ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ರೂ.812.17 ಕೋಟಿ ವೆಚ್ಚದಲ್ಲಿ ಸಿ.ಸಿ. ರಸ್ತೆ, ಒಳ ಚರಂಡಿ ಮತ್ತು ಇತರೆ ಮೂಲಭೂತ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.
* ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ 7605 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

## ಭಾರಿ ನೀರಾವರಿ ಇಲಾಖೆ

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 1709.99 | 1707.74 | 100 |
| ಟಿ.ಎಸ್.ಪಿ | 590.32 | 589.87 | 100 |

* ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.

**<u>ಪ್ರಮುಖ ಕಾರ್ಯಕ್ರಮಗಳು:</u>**

* ಕೃಷ್ಣ ಭಾಗ್ಯ ಜಲನಿಗಮ, ಕರ್ನಾಟಕ ನೀರಾವರಿ ನಿಗಮ, ಕಾಡಾ ಮತ್ತು ಯು.ಕೆ.ಪಿ–ಎ.ಐ.ಬಿ.ಪಿ ಸಂಸ್ಥೆಗಳ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರು ಹೊಂದಿರುವ ಜಮೀನುಗಳಿಗೆ ನೀರಾವರಿ ಸೌಲಭ್ಯಗಳಾದ ಏತ ನೀರಾವರಿ, ತೆರೆದಬಾವಿ, ಕೊಳವೆ ಬಾವಿಗಳನ್ನು ನಿರ್ಮಿಸಲಾಗಿದೆ.
* ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿ/ಪಂಗಡದ ಕಾಲೋನಿಗಳಲ್ಲಿ ರಸ್ತೆ, ಸಮುದಾಯ ಭವನ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.
* ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ರಡಿ 7522 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

## ಸಣ್ಣ ನೀರಾವರಿ ಇಲಾಖೆ :

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 190.47 | 185.65 | 97 |
| ಟಿ.ಎಸ್.ಪಿ | 97.39 | 83.83 | 90 |

- ಒಟ್ಟು ಶೇ.94 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ರೈತರ ಜಮೀನುಗಳಿಗೆ ವೈಯಕ್ತಿಕ ಮತ್ತು ಸಾಮೂಹಿಕ ನೀರಾವರಿ ಸೌಲಭ್ಯ ಕಲ್ಪಿಸಲು ಏತ ನೀರಾವರಿ, ತೆರೆದ ಬಾವಿ, ಕೊಳವೆ ಬಾವಿ ಹಾಗೂ ಅಂತರ್ಜಲ ವೃದ್ಧಿಸಲು ಚೆಕ್‌ಡ್ಯಾಂ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.
- ಸಣ್ಣ ನೀರಾವರಿ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 9626 ಹೆಕ್ಟೇರ್ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

## ವೈದ್ಯಕೀಯ ಶಿಕ್ಷಣ ಇಲಾಖೆ :

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 28.56 | 28.56 | 100 |
| ಟಿ.ಎಸ್.ಪಿ | 9.55 | 9.55 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಜಯದೇವ ಹೃದ್ರೋಗ ಸಂಸ್ಥೆ, ಕಿದ್ವಾಯಿ ಮತ್ತಿತರ ಉನ್ನತ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ರೋಗಿಗಳಿಗೆ ಚಿಕಿತ್ಸೆ ಹಾಗೂ ಶಸ್ತ್ರ ಚಿಕಿತ್ಸೆಗಾಗಿ ತಗಲುವ ಪೂರ್ಣ ವೆಚ್ಚ ಭರಿಸಲಾಗಿದೆ.
- ವೈದ್ಯಕೀಯ ವಿದ್ಯಾರ್ಥಿಗಳಿಗೆ ಸ್ಟೆತಸ್ಕೋಪ್/ಏಪ್ರಾನ್/ಬಿ.ಪಿ. ಪರೀಕ್ಷೆ ಉಪಕರಣ, ಪಠ್ಯ ಪುಸ್ತಕ, ಆಕರ ಪುಸ್ತಕಗಳನ್ನು ಉಚಿತವಾಗಿ ಒದಗಿಸಲಾಗಿದೆ.
- ವೈದ್ಯಕೀಯ ಹಾಗೂ ದಂತ ವೈದ್ಯಕೀಯ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಮಾಡಲಾಗಿದೆ.
- ಪ.ಜಾತಿ/ಪ.ಪಂಗಡದ 47 ಎಂ.ಬಿ.ಬಿ.ಎಸ್ ವಿದ್ಯಾರ್ಥಿಗಳಿಗೆ ಮತ್ತು 8 ದಂತ ವೈದ್ಯಕೀಯ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ನೀಡಲಾಗಿದೆ.

ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 23848 ಪರಿಶಿಷ್ಟ ಜಾತಿ ಮತ್ತು 21616 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ :

ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 382.06 | 283.48 | 74 |
| ಟಿ.ಎಸ್.ಪಿ | 158.03 | 123.90 | 78 |

- ಒಟ್ಟು ಶೇ.76 ಅನುದಾನ ವೆಚ್ಚಮಾಡಲಾಗಿದೆ.

ಪ್ರಮುಖ ಕಾರ್ಯಕ್ರಮಗಳು:

- ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಜನರಿಗೆ ವಿವಿಧ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಜನನಿ ಸುರಕ್ಷಾ ಯೋಜನೆ, ರೋಗನಿರೋಧಕ ಲಸಿಕಾ ಕಾರ್ಯಕ್ರಮ, ರಾಷ್ಟ್ರೀಯ ಬಾಲ ಸುರಕ್ಷಾ ಕಾರ್ಯಕ್ರಮ, ಸುವರ್ಣ ಆರೋಗ್ಯ ಚೈತನ್ಯ, ಆರೋಗ್ಯ ಕವಚ ಮತ್ತು ಸಂಚಾರಿ ಆರೋಗ್ಯ ಘಟಕಗಳ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ.
- ಶುಚಿ ಯೋಜನೆಯಡಿ ಒಟ್ಟು 7.70 ಲಕ್ಷ ಮಹಿಳೆಯರಿಗೆ ಸ್ಯಾನಿಟರಿ ಕಿಟ್‌ಗಳನ್ನು ನೀಡಲಾಗಿದೆ.
- ಆರೋಗ್ಯ ಕವಚ 108 ರಡಿ 2.05 ಲಕ್ಷ ಜನರಿಗೆ ಆಂಬ್ಯುಲೆನ್ಸ್ ಸೇವೆ ಒದಗಿಸಲಾಗಿದೆ.
- ಸುವರ್ಣ ಆರೋಗ್ಯ ಸುರಕ್ಷಾ ಯೋಜನೆ, ವಾಜಪೇಯಿ ಆರೋಗ್ಯ ಶ್ರೀ ಚಿಕಿತ್ಸಾ ಯೋಜನೆಯನ್ನು ಎಲ್ಲಾ ಜಿಲ್ಲೆಯ ಬಡತನ ರೇಖೆಗಿಂತ ಕೆಳಗಿರುವ ಜನರಿಗೆ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ಈ ಯೋಜನೆಯಡಿ ಹೃದ್ರೋಗ, ಕ್ಯಾನ್ಸರ್, ನರರೋಗ, ಮೂತ್ರಪಿಂಡ ವೈಫಲ್ಯ, ಸುಟ್ಟ ಗಾಯಗಳು, ಪಾಲಿಟ್ರಾಮಾ ಇತ್ಯಾದಿ ಶಸ್ತ್ರ ಚಿಕಿತ್ಸೆಗಳಿಗೆ 1.50 ಲಕ್ಷ ದಿಂದ 2 ಲಕ್ಷದವರೆಗೆ ನಿಗದಿತ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ನೀಡಲಾಗಿದೆ.
- ಡಯಾಲಿಸಿಸ್ ಘಟಕ ಮತ್ತು ಸುಟ್ಟ ಗಾಯಗಳ ಚಿಕಿತ್ಸಾ ಘಟಕಗಳ ಸ್ಥಾಪನೆ ಮಾಡಲಾಗಿದೆ.
- ಮೀಸಲು ವಿಧಾನಸಭಾ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರು ಹೆಚ್ಚಿನ ಸಂಖ್ಯೆ ವಾಸಿಸುವ ಸ್ಥಳಗಳಲ್ಲಿ ಉಚಿತ ಆರೋಗ್ಯ ತಪಾಸಣೆ, ಸೂಕ್ತ ಔಷಧಿ ವಿತರಣೆ, ಆರೋಗ್ಯ ಸಂಸ್ಥೆಗಳನ್ನು ಉನ್ನತೀಕರಿಸಿ, ಉಪಕರಣಗಳನ್ನು ಒದಗಿಸಲಾಗಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕೊರಗ ಜನಾಂಗದ ಆರೋಗ್ಯ ಸುಧಾರಣೆಗೆ ವಿಶೇಷ ಯೋಜನೆ ರೂಪಿಸಲಾಗಿದೆ.
- ಭಾರತೀಯ ವೈದ್ಯ ಪದ್ಧತಿಯಲ್ಲಿ ಬರುವ ಆಯುಷ್ ಹೋಮಿಯೋಪತಿ, ಯುನಾನಿ, ಪ್ರಕೃತಿ ಚಿಕಿತ್ಸಾ ಇವುಗಳಲ್ಲಿ ಉಚಿತ ಚಿಕಿತ್ಸೆ ಮತ್ತು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್‌ಟಾಪ್‌ಗಳನ್ನು ನೀಡಲಾಗುತ್ತಿದೆ.
- ಜನನಿ ಸುರಕ್ಷಾ ಯೋಜನೆಯಡಿ ಖಾಸಗಿ ಆಸ್ಪತ್ರೆಗಳಲ್ಲಿ 100 ಹೆರಿಗೆಗೆ ರೂ.3.00 ಲಕ್ಷ ಆರ್ಥಿಕ ಸಹಾಯ ಮತ್ತು ಹೆರಿಗೆ ಭತ್ಯೆ ರೂ.1000/- ದಂತೆ ನೀಡಲಾಗಿದೆ.
- ಮೀಸಲು ಕ್ಷೇತ್ರಗಳಲ್ಲಿ ಆಸ್ಪತ್ರೆ ಕಟ್ಟಡಗಳ ದುರಸ್ಥಿ / ಉನ್ನತೀಕರಣ ಕಾಮಗಾರಿ ಅನುಷ್ಠಾನ ಮಾಡಲಾಗಿದೆ.
- ತಾಯಿ ಭಾಗ್ಯ ಯೋಜನೆಯಡಿ ಮಡಿಲು ಕಿಟ್ ವಿತರಣೆ ಹಾಗೂ ಗರ್ಭಿಣಿ ಮಹಿಳೆಯರಿಗೆ ಪೌಷ್ಠಿಕಾಂಶಗಳ ನೆರವು ಪಡೆಯಲು ರೂ.2,000/- ಧನಸಹಾಯ ನೀಡಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 7.49 ಲಕ್ಷ ಪರಿಶಿಷ್ಟ ಜಾತಿ ಮತ್ತು 2.59 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಆರೋಗ್ಯ ಸೌಲಭ್ಯ ಕಲ್ಪಿಸಲಾಗಿದೆ.

## ಕಾರ್ಮಿಕ, ಉದ್ಯೋಗ ಮತ್ತು ತರಬೇತಿ ಇಲಾಖೆ :

**ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 62.01 | 59.51 | 96 |
| ಟಿ.ಎಸ್.ಪಿ | 25.32 | 20.81 | 82 |

- ಒಟ್ಟು ಶೇ. 89 ಅನುದಾನ ವೆಚ್ಚಮಾಡಲಾಗಿದೆ.

ಪ್ರಮುಖ ಕಾರ್ಯಕ್ರಮಗಳು:

- 10314 ಪರಿಶಿಷ್ಟ ಜಾತಿ, 3104 ಪರಿಶಿಷ್ಟ ಪಂಗಡದ ಐಟಿಐ ವಿದ್ಯಾರ್ಥಿಗಳಿಗೆ ಟೂಲ್ ಕಿಟ್, ಸಮವಸ್ತ್ರ, ಶೂ, ಪುಸ್ತಕಗಳು, ಬ್ಯಾಗ್, ಟ್ಯಾಬ್ಸ್, ತಾಂತ್ರಿಕ ಪಠ್ಯ ಪುಸ್ತಕಗಳನ್ನು ಸರಬರಾಜು ಮಾಡಲಾಗಿದೆ.

- ಅಪಘಾತ ಪರಿಹಾರ ಯೋಜನೆಯಡಿ 23542 ಪರಿಶಿಷ್ಟ ಜಾತಿ ಮತ್ತು 7341 ಪರಿಶಿಷ್ಟ ಪಂಗಡದ ಖಾಸಗಿ ವಾಹನ ಚಾಲಕರಿಗೆ ರೂ.34.96 ಲಕ್ಷ ವೆಚ್ಚದಲ್ಲಿ ಪ್ರಿಮೀಯಂ ಮೊತ್ತ ಭರಿಸಲಾಗಿದೆ.
- 6914 ಪರಿಶಿಷ್ಟ ಜಾತಿ ಮತ್ತು 3758 ಪರಿಶಿಷ್ಟ ಪಂಗಡದ ಬಾಲಕಾರ್ಮಿಕರಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸಲಾಗಿದೆ.
- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರು ನಡೆಸಲು ಸಂಸ್ಥೆಗಳಿಗೆ ಯಂತ್ರೋಪಕರಣ ಖರೀದಿಗೆ ಸಹಾಯಧನ ನೀಡಲಾಗಿದೆ.

ಕಾರ್ಮಿಕ, ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 47592 ಪರಿಶಿಷ್ಟ ಜಾತಿ ಮತ್ತು 16131 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಇಂಧನ ಇಲಾಖೆ :

ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 40.32 | 40.32 | 100 |
| ಟಿ.ಎಸ್.ಪಿ | 13.69 | 13.69 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಡಿ ಕೊರೆದ 6355 ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲಾಗಿದೆ.
- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ 50 ರೈತರಿಗೆ ಸೋಲಾರ್ ಪಂಪ್ ಸೆಟ್‌ಗಳನ್ನು ನೀಡಲಾಗಿದೆ.

ಇಂಧನ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 4332 ಪರಿಶಿಷ್ಟ ಜಾತಿ ಮತ್ತು 2073 ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಕನ್ನಡ ಮತ್ತು ಸಂಸ್ಕೃತಿ ಇಲಾಖೆ :

ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 30.58 | 30.10 | 98 |
| ಟಿ.ಎಸ್.ಪಿ | 12.40 | 12.26 | 98 |

- ಒಟ್ಟು ಶೇ.98 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಲಾವಿದರಿಗೆ ಧನಸಹಾಯ ನೀಡಲಾಗಿದೆ.
- ಸಾಕ್ಷ್ಯಚಿತ್ರಗಳ ನಿರ್ಮಾಣಕ್ಕೆ ಧನಸಹಾಯ ನೀಡಲಾಗಿದೆ.
- ಸಾಂಸ್ಕೃತಿಕ ಭವನ ಮತ್ತು ಬಯಲು ರಂಗಮಂದಿರ ನಿರ್ಮಾಣ ಮಾಡಲಾಗಿದೆ.
- ಜನಪದ ಉತ್ಸವ/ಕಲಾ ಶಿಬಿರಗಳನ್ನು ಏರ್ಪಡಿಸಲಾಗಿದೆ.
- ಹೊರನಾಡು/ವಿದೇಶಗಳ ಸಾಂಸ್ಕೃತಿಕ ಉತ್ಸವಕ್ಕೆ ಕಲಾ ತಂಡಗಳನ್ನು ಕಳುಹಿಸಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 31466 ಪರಿಶಿಷ್ಟ ಜಾತಿ ಮತ್ತು 21445 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

**ಯೋಜನಾ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ :**

**ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 276.61 | 276.61 | 100 |
| ಟಿ.ಎಸ್.ಪಿ | 132.23 | 132.23 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಎಸ್.ಸಿ.ಎಸ್.ಪಿ./ಟಿ.ಎಸ್.ಪಿ ಯೋಜನೆಯಡಿ 366 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.
- ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಬಯಲು ಸೀಮೆ ಅಭಿವೃದ್ಧಿ ಮಂಡಳಿ, ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿ ಅಡಿಯಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ/ ಪ್ರದೇಶಗಳಲ್ಲಿ ಕಾಂಕ್ರೀಟ್ ರಸ್ತೆ, ಸಮುದಾಯ ಭವನ ನಿರ್ಮಾಣ, ಸಂಪರ್ಕ ರಸ್ತೆ, ಶುದ್ಧ ಕುಡಿಯುವ ನೀರಿನ ಘಟಕ ಅಳವಡಿಕೆ, ಅಂಗನವಾಡಿ ಕೇಂದ್ರ ನಿರ್ಮಾಣ, ಅಂಗನವಾಡಿ/ಶಾಲೆಗಳಿಗೆ ಕಟ್ಟಡ, ಶೌಚಾಲಯ ಇತ್ಯಾದಿ ಮೂಲಭೂತ ಸೌಕರ್ಯ ಕಲ್ಪಿಸಲು ಅನುದಾನ ನೀಡಲಾಗಿದೆ.

**ಕಾನೂನು ಇಲಾಖೆ :**

**ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 0.77 | 0.42 | 55 |
| ಟಿ.ಎಸ್.ಪಿ | 0.32 | 0.20 | 62.50 |

- ಒಟ್ಟು ಶೇ.58 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಕಾನೂನು ತರಬೇತಿ ಪಡೆಯುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಪದವೀಧರರಿಗೆ ಶಿಷ್ಯವೇತನ ನೀಡಲಾಗಿದೆ.

**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:**

ಸಣ್ಣ ನೀರಾವರಿ ಇಲಾಖೆಯು ಎಸ್.ಸಿ.ಎಸ್.ಪಿ ರಡಿ ಆದ್ಯರ್ಪಿಸಿರುವ ರೂ.39.00 ಕೋಟಿಗಳನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ಶಾಲೆಗಳ ಕಟ್ಟಡ ನಿರ್ಮಾಣಕ್ಕೆ ಕ್ರೈಸ್ ಸಂಸ್ಥೆಗೆ ನೀಡಲಾಗಿದೆ.

**ಸಮಾಜ ಕಲ್ಯಾಣ ಇಲಾಖೆ:-ಪ.ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳು :**

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 2935.26 | 2919.29 | 99.45 |
| ಟಿ.ಎಸ್.ಪಿ | 1052.91 | 966.96 | 92 |

- ಒಟ್ಟು ಶೇ.96 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿರ್ವಹಣೆ-ಪ.ಜಾತಿ ವಿದ್ಯಾರ್ಥಿಗಳಿಗೆ 1834 ವಿದ್ಯಾರ್ಥಿನಿಲಯಗಳನ್ನು ಮತ್ತು ಪ.ಪಂ ವಿದ್ಯಾರ್ಥಿಗಳಿಗೆ 310 ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ. ಈ ವಿದ್ಯಾರ್ಥಿನಿಲಯಗಳಲ್ಲಿ 1.69 ಲಕ್ಷ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸಲಾಗಿದೆ.
- ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಮಾಹೆಯಾನ ಭೋಜನಾ ವೆಚ್ಚಕ್ಕಾಗಿ ರೂ. 900 ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ರೂ.1100.00 ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ವಿದ್ಯಾರ್ಥಿಗಳಿಗೆ ರೂ.1200.00 ಗಳನ್ನು ನೀಡಲಾಗಿದೆ.
- ವಿದ್ಯಾರ್ಥಿ ನಿಲಯಗಳಲ್ಲಿ ಇಲ್ಲದೇ ಇರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ತರಗತಿ ಆಧಾರದಲ್ಲಿ ವಾರ್ಷಿಕ ರೂ.750/- ರಿಂದ ರೂ.1100/- ಡೇ ಸ್ಕಾಲರ್‌ಶಿಪ್ ನೀಡಲಾಗುತ್ತಿದೆ. 6.23 ಲಕ್ಷ ಪ.ಜಾತಿ ವಿದ್ಯಾರ್ಥಿಗಳಿಗೆ ಒಟ್ಟು ರೂ.60.41 ಕೋಟಿ ವೆಚ್ಚದಲ್ಲಿ ಮತ್ತು 2.31 ಲಕ್ಷ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ರೂ.32.00 ಕೋಟಿ ವೆಚ್ಚದಲ್ಲಿ ಸ್ಕಾಲರ್‌ಶಿಪ್ ನೀಡಲಾಗಿದೆ.
- ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ – 312316 ಪ.ಜಾತಿ ವಿದ್ಯಾರ್ಥಿಗಳಿಗೆ ರೂ.328.64 ಕೋಟಿ ಪರಿಶಿಷ್ಟ ಪಂಗಡ 99489 ವಿದ್ಯಾರ್ಥಿಗಳಿಗೆ ರೂ.83.40 ಕೋಟಿ ವಿದ್ಯಾರ್ಥಿ ವೇತನ ನೀಡಲಾಗಿದೆ.
- ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಧನಸಹಾಯ– ವಾರ್ಷಿಕ ವರಮಾನ ರೂ.6.00 ಲಕ್ಷದೊಳಗೆ ಇರುವವರಿಗೆ ಶೇ.100 ರಷ್ಟು ಮತ್ತು ರೂ.6.00 ಲಕ್ಷದಿಂದ ರೂ.15.00 ಲಕ್ಷ ಇರುವವರಿಗೆ ಶೇ.50 ರಷ್ಟು ಅನುದಾನ ಸರ್ಕಾರದಿಂದ ನೀಡಲಾಗುತ್ತಿದೆ. 63 ವಿದ್ಯಾರ್ಥಿಗಳಿಗೆ ರೂ.14.01 ಕೋಟಿ ಅನುದಾನ ವಿನಿಯೋಗಿಸಲಾಗಿದೆ.
- ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ವತಿಯಿಂದ 505 ವಸತಿ ಶಾಲೆಗಳನ್ನು ಪ.ಜಾತಿ/ಪ.ಪಂ ವಿದ್ಯಾರ್ಥಿಗಳಿಗಾಗಿ ನಿರ್ವಹಿಸಲಾಗುತ್ತಿದೆ. 1.05 ಲಕ್ಷ ವಿದ್ಯಾರ್ಥಿಗಳು ಪ್ರವೇಶ ಪಡೆದಿರುತ್ತಾರೆ.
- ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇ.60 ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ರೂ.7000/- ರಿಂದ ರೂ.15000/- ರವರೆಗೆ ಮತ್ತು ಪ್ರಥಮ ಬಾರಿಗೆ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ-ಪಿ.ಯು.ಸಿ ರೂ.20000/-, ಪದವಿ ರೂ.25000/-, ಸ್ನಾತ್ತಕೋತ್ತರ ರೂ.30000/-, ಇಂಜಿನಿಯರಿಂಗ್/ವೈದ್ಯಕೀಯ ರೂ.35000/- ಒಟ್ಟು 81109 ವಿದ್ಯಾರ್ಥಿಗಳಿಗೆ ರೂ.99.57 ಕೋಟಿ ಪ್ರೋತ್ಸಾಹಧನ ನೀಡಲಾಗಿದೆ.
- ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ರೂ.2.50 ಲಕ್ಷ ಇರುವವರಿಗೆ ಶೇ.100 ರಷ್ಟು ಹಾಗೂ ರೂ.2.50 ಲಕ್ಷಗಳಿಂದ ರೂ.10.00 ಲಕ್ಷ ಇರುವವರಿಗೆ ಶೇ.50 ರಷ್ಟು ಶುಲ್ಕ ಮರುಪಾವತಿ ಮಾಡಲಾಗಿದೆ.
- ಕರ್ನಾಟಕ ಭೋವಿ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲಾಗಿದೆ.
- ಕರ್ನಾಟಕ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲಾಗಿದೆ.

**II ಮೂಲಭೂತ ಸೌಕರ್ಯಗಳು**

- ಪರಿಶಿಷ್ಟ ಜಾತಿ/ ಪ.ಪಂ ಕಾಲೋನಿಗಳಲ್ಲಿ ಸಮುದಾಯ ಭವನಗಳ ನಿರ್ಮಾಣ- ರೂ.100.00 ಕೋಟಿ ಅನುದಾನದಲ್ಲಿ 1757 ಪ.ಜಾತಿ ಸಮುದಾಯ ಭವನಗಳು ಹಾಗೂ ರೂ.30.00 ಕೋಟಿ ಅನುದಾನದಲ್ಲಿ 72 ಪಪಂಗಡ ಸಮುದಾಯ ಭವನಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ.
- ಪರಿಶಿಷ್ಟ ಜಾತಿಯ/ಪ.ಪಂ ಕಾಲೋನಿಗಳಿಗೆ ಮೂಲಭೂತ ಸೌಕರ್ಯಗಳಿಗೆ ರೂ.256.00 ಕೋಟಿ ಮೊತ್ತ ವಿನಿಯೋಗಿಸಲಾಗಿದೆ.
- ಲ್ಯಾಂಪ್ ಸೊಸೈಟಿಗಳಲ್ಲಿ VAT ನ್ನು ಮರುಪಾವತಿಸಲಾಗಿದೆ.

### III ತರಬೇತಿ ಕಾರ್ಯಕ್ರಮ

- ೩೩೮೦ ಅಭ್ಯರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿ ನೀಡಲು ರೂ.೩೨.೦೪ ಕೋಟಿ ವೆಚ್ಚ ಭರಿಸಲಾಗಿದೆ.

### IV ಅಂತರ್ಜಾತಿ/ಸರಳ ವಿವಾಹಕ್ಕೆ ಪ್ರೋತ್ಸಾಹಧನ

- ಅಂತರ್‌ಜಾತಿ ವಿವಾಹವಾದ 1785 ಪರಿಶಿಷ್ಟ ಜಾತಿ ದಂಪತಿಗಳಿಗೆ ರೂ.12.18 ಕೋಟಿ ಪ್ರೋತ್ಸಾಹಧನ ನೀಡಲಾಗಿದೆ.
- ಅಂತರ್ಜಾತಿ ವಿವಾಹವಾದ ಪುರುಷರಿಗೆ ರೂ.2.00 ಲಕ್ಷ ಹಾಗೂ ಮಹಿಳೆಯರಿಗೆ ರೂ.3.00 ಲಕ್ಷ ಪ್ರೋತ್ಸಾಹಧನ ನೀಡಲಾಗಿದೆ.
- ಸರಳ ವಿವಾಹವಾದ ದಂಪತಿಗಳಿಗೆ ಒಂದು ಬಾರಿಗೆ ರೂ.50000/- ಆರ್ಥಿಕ ನೆರವು ನೀಡಲಾಗಿದೆ.

### V. ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು

- ಪ.ಜಾತಿ/ಪ.ಪಂಗಡದ ಉದ್ಯಮಿಗಳಿಗೆ ಶೇ.4 ಬಡ್ಡಿ ಸಹಾಯಧನ ಕಾರ್ಯಕ್ರಮದಡಿ ಗರಿಷ್ಠ ಸಾಲದ ಮೊತ್ತವನ್ನು ರೂ.2.00 ಕೋಟಿಯಿಂದ ರೂ.5.00 ಕೋಟಿಗೆ ಹೆಚ್ಚಿಸಲಾಗಿದೆ. ಮರುಪಾವತಿ ಅವಧಿ 8 ವರ್ಷ.
- ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ಶೇ.4 ಬಡ್ಡಿ ಸಹಾಯಧನ ಯೋಜನೆಯಡಿ 282 ಪ.ಜಾತಿ ಹಾಗೂ 96 ಪ.ಪಂಗಡ ಫಲಾನುಭವಿಗಳಿಗೆ ಒಟ್ಟು ರೂ.31.74 ಕೋಟಿ ಬಡ್ಡಿಸಹಾಯಧನ ನೀಡಲಾಗಿದೆ.
- ಸಾಲ ಮನ್ನಾ ಯೋಜನೆಯಡಿ ಒದಗಿಸಲಾದ ಅನುದಾನವನ್ನು ಭಾರತ ಸರ್ಕಾರದ ರಾಷ್ಟ್ರೀಯ ಪ.ಜಾತಿ/ಪ.ಪಂಗಡದ ಅಭಿವೃದ್ಧಿ ನಿಗಮಗಳಿಂದ ಪಡೆದ ಸಾಲದ ಮರುಪಾವತಿಗೆ ಉಪಯೋಗಿಸಲಾಗುತ್ತದೆ.
- ಷೇರು ಬಂಡವಾಳ ಅನುದಾನವನ್ನು ಫಲಾನುಭವಿಗಳಿಗೆ ಸಾಲ/ಅಂಚಿನ ಹಣ ನೀಡಲು ಉಪಯೋಗಿಸಲಾಗುತ್ತದೆ.
- ಸ್ವಯಂ ಉದ್ಯೋಗ ಕಾರ್ಯಕ್ರಮಗಳಲ್ಲಿ ಸಹಾಯಧನ ಗರಿಷ್ಠ ರೂ.5.00 ಲಕ್ಷವರೆಗೆ ನೀಡಲಾಗುತ್ತಿದ್ದು, ಮತ್ತು ಸಾಲವನ್ನು ಬ್ಯಾಂಕ್ ಮೂಲಕ ಪಡೆಯಲಾಗುತ್ತಿದೆ.

## ಡಾ: ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ

ಡಾ:.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಪ.ಜಾತಿ ಫಲಾನುಭವಿಗಳಿಗೆ ಮತ್ತು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದಿ ನಿಗಮಗಳಿಂದ ಪ.ಪಂಗಡದ ಫಲಾನುಭವಿಗಳಿಗೆ ಸಾಲ ಮತ್ತು ಸಹಾಯಧನ ನೀಡಲಾಗುತ್ತಿದ್ದು, ವಿವರ ಈ ಕೆಳಕಂಡಂತಿದೆ.

(ರೂ.ಕೋಟಿಗಳಲ್ಲಿ)

| ಕ್ರ.ಸಂ. | ಕಾರ್ಯಕ್ರಮ | ಹಂಚಿಕೆ | ವೆಚ್ಚದ ಮೊತ್ತ | ಭೌತಿಕ ಸಾಧನೆ |
|---|---|---|---|---|
| 1. | ಗಂಗಾ ಕಲ್ಯಾಣ | 200.00 | 200.00 | 16470 |
| 2. | ಸ್ವಯಂ ಉದ್ಯೋಗ | 52.28 | 52.28 | 10946 |
| 3. | ಸಾಲಮನ್ನ | 106.00 | 106.00 | - |
| 4. | ಕಿರು ಸಾಲ ಯೋಜನೆ | 10.00 | 10.00 | 19175 |
| 5. | ಇತರ ಬಂಡವಾಳ | 20.00 | 20.00 | - |
| 6 | ಷೇರು ಬಂಡವಾಳ | 73.00 | 38.25 | - |
| | **ಒಟ್ಟು** | **451.00** | **426.53** | **47708** |

## ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ

(ರೂ.ಕೋಟಿಗಳಲ್ಲಿ)

| ಕ್ರ.ಸಂ. | ಕಾರ್ಯಕ್ರಮ | ಹಂಚಿಕೆ | ವೆಚ್ಚದ ಮೊತ್ತ | ಭೌತಿಕ ಸಾಧನೆ |
|---|---|---|---|---|
| 1. | ಗಂಗಾ ಕಲ್ಯಾಣ | 125.00 | 125.00 | 6063 |
| 2. | ಸ್ವಯಂ ಉದ್ಯೋಗ | 40.00 | 40.00 | 6692 |
| 3. | ಷೇರು ಬಂಡವಾಳ | 2.00 | 2.00 | - |
| 4. | ಕಿರು ಸಾಲ ಯೋಜನೆ | 11.00 | 11.00 | - |
| | **ಒಟ್ಟು** | **178.00** | **178.00** | **16103** |

## ಡಾ:ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ

ಮೇಲ್ಕಂಡ ನಿಗಮದಿಂದ ಚರ್ಮ ಕುಶಲಕರ್ಮಿಗಳಿಗೆ ಸಾಲ ಸೌಲಭ್ಯ, ತರಬೇತಿ, ಟೂಲ್‌ಕಿಟ್, ಮಾರಾಟ ಕುಠೀರ ಮತ್ತು ಮನೆಗಳ ನಿರ್ಮಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಸಲಾಗುತ್ತಿದೆ. ವಸತಿ ಮತ್ತು ಕಾರ್ಯಾಗಾರ ನಿರ್ಮಾಣ, ರಸ್ತೆ ಬದಿ ಕುಠೀರಗಳ ವಿತರಣೆ ತರಬೇತಿ ಕಾರ್ಯಕ್ರಮಗಳು ಇತ್ಯಾದಿಗಳಿಗೆ ರೂ.55.00 ಕೋಟಿ ಅನುದಾನ ಒದಗಿಸಲಾಗಿದೆ. 6974 ಚರ್ಮ ಕುಶಲ ಕರ್ಮಿಗಳಿಗೆ ಸೌಲಭ್ಯ ಒದಗಿಸಲಾಗಿದೆ.

## ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ

ಕರ್ನಾಟಕ ತಾಂಡ ಅಭಿವೃದ್ಧಿ ನಿಗಮದಿಂದ ಬಂಜಾರ ತಾಂಡಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ. ಬಂಜಾರ ಸಮುದಾಯದ ಅಭಿವೃದ್ಧಿಗಾಗಿ ತಾಂಡ ಅಭಿವೃದ್ಧಿ ನಿಗಮಕ್ಕೆ ರೂ.75.00 ಕೋಟಿಗಳನ್ನು ನೀಡಲಾಗಿದೆ. ತಾಂಡಗಳಲ್ಲಿ 172 ಸೇವಾಲಾಲ್/ಬಂಜಾರ ಸಮುದಾಯ ಭವನಗಳನ್ನು, 178 ತಾಂಡಗಳಲ್ಲಿ ಸಿ.ಸಿ.ರಸ್ತೆ, ಚರಂಡಿ ಕಾಮಗಾರಿ, 10 ಅಂಗನವಾಡಿ ಕಟ್ಟಡಗಳನ್ನು ಮತ್ತು 36 ಸಂಪರ್ಕ ರಸ್ತೆ ಕಾಮಗಾರಿಗಳನ್ನು ಅನುಷ್ಠಾನ ಮಾಡಲಾಗಿದೆ.

ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ ಮತ್ತು ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮಗಳನ್ನು ಹೊಸದಾಗಿ ಸ್ಥಾಪಿಸಲಾಗಿದ್ದು, ಸದರಿ ನಿಗಮಗಳ ಕಾರ್ಯಕ್ರಮಗಳನ್ನು ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದಲೇ ಪ್ರಸಕ್ತ ವರ್ಷದಲ್ಲಿ ಅನುಷ್ಠಾನಮಾಡಲಾಗಿದೆ.

*******